# ಮಾತುಗಾರಿಕೆಗೆ ಮಾರುಹೋದ ಜರ್ಮನಿಯ ಪೌಲ್



‘ಭಾರತೀಯರು ಹೆಚ್ಚು ಮಾತನಾಡುತ್ತಾರೆ. ಅಪರಿಚಿತರೊಂದಿಗೂ ಬೆರೆಯುವ ಹೃದಯವಂತರು’ ಎನ್ನುತ್ತಲೇ ಮಾತು ಶುರುವಿಟ್ಟ ಜರ್ಮನಿಯ ಪೌಲ್ ಆ ‘ಮಾತುಗಾರಿಕೆ’ಯನ್ನು ತುಂಬಾ ಇಷ್ಟಪಡುತ್ತಾರೆ. ‘ಇಲ್ಲಿಗೆ ಬಂದ ಹೊಸತು. ಎಲ್ಲಿ ನೋಡಿದರೂ ಜನವೋ ಜನ. ಯಾವ ರಸ್ತೆಗಳಲ್ಲಿ ಓಡಾಡಿದರೂ, ಯಾವ ಬಸ್‌ನಲ್ಲಿ ಪ್ರಯಾಣಿಸಿದರೂ ಜನ. ಪ್ರತಿಯೊಬ್ಬರ ಬಾಯಲ್ಲೂ ಮಾತು, ಮಾತು... ಅಪರಿಚಿತರನ್ನೂ ಪರಿಚಯ ಮಾಡಿಕೊಂಡು ಮಾತನಾಡಿಸುವ ಇಲ್ಲಿನವರ ಗುಣ ಕಂಡು ಮೊದಮೊದಲೂ ಅಚ್ಚರಿಯಾದರೂ, ಆ ಬಳಿಕ ನಾನೂ ಮಾರುಹೋದೆ’ ಎನ್ನುತ್ತಾರೆ ಪೌಲ್.

‘ನಮ್ಮ ದೇಶದಲ್ಲಿ ಮಾತು ಕಡಿಮೆ; ಕೆಲಸ ಹೆಚ್ಚು ಎನ್ನುವ ಅಲಿಖಿತ ಸಿದ್ಧಾಂತಕ್ಕೆ ಕಟ್ಟುಬಿದ್ದಿದ್ದಾರೆ. ಇಲ್ಲಿ ಹಾಗಲ್ಲ ಮಾತೂ ಹೆಚ್ಚು; ಕೆಲಸವೂ ಹೆಚ್ಚು’ ಎಂದು ನಗುತ್ತಾರೆ ಪೌಲ್.

‘ಎಫ್‌ಎಸ್‌ಎಲ್ ಇಂಡಿಯಾ’ ಸಂಸ್ಥೆ ಮೂಲಕ ಸ್ವಯಂಸೇವಕರಾಗಿ ಭಾರತಕ್ಕೆ ಬಂದಿರುವ ಪೌಲ್ 11 ತಿಂಗಳಿನಿಂದ ಮೈಸೂರಿನ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಶಿಕ್ಷಕರಾಗಿ, ಮಾರ್ಗದರ್ಶಕರಾಗಿ ಕೆಲಸ ಮಾಡುತ್ತಿದ್ದಾರೆ. ‘ಗ್ರಾಮೀಣ ವಿದ್ಯಾರ್ಥಿಗಳೊಂದಿಗೆ ಬೆರೆಯುವ ಸಮಯ ಮಧುರವಾದದ್ದು’ ಎಂದು ವ್ಯಾಖ್ಯಾನಿಸುವ ಪೌಲ್, ವಿದ್ಯಾರ್ಥಿಗಳಿಗೆ ಸರಳ ಇಂಗ್ಲಿಷ್ ಕಲಿಸುವಿಕೆಯಲ್ಲಿ ನಿರತರಾಗಿದ್ದಾರೆ.

ಆರಂಭದಲ್ಲಿ ಹುಣಸೂರಿನ ಸರ್ಕಾರಿ ಶಾಲೆಗೆ ಹೋದಾಗ ವಿದ್ಯಾರ್ಥಿಗಳು ‘ಫಾರಿನ್ ಮೇಷ್ಟ್ರು ಬಂದ್ರು, ಬಿಳಿ ಮೇಷ್ಟ್ರು ಬಂದ್ರು’ ಎಂದು ಕೂಗುತ್ತಿದ್ದರಂತೆ. ‘ಆಗೆಲ್ಲಾ ಒಂಥರಾ ಖುಷಿಯಾಗುತ್ತಿತ್ತು’ ಎಂದು ಮುಗುಳ್ನಗುತ್ತಾರೆ.

‘ಜರ್ಮನಿಗೆ ಹೋಲಿಸಿದರೆ ಇಲ್ಲಿನ ತರಗತಿಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚು. ಪ್ರತಿ ಮಗುವಿನ ಮೇಲೆ ನಿಗಾ ಇಟ್ಟು ಪಾಠ ಮಾಡುವುದು ಸವಾಲೇ ಸರಿ. ಅಲ್ಲಿ ತರಗತಿಗೆ 25ರಿಂದ 35 ಮಕ್ಕಳು ಮಾತ್ರವೆ ಇರುತ್ತಾರೆ’ ಎನ್ನುವ ಅವರು, ಹಾಡು, ನೃತ್ಯ, ನಾಟಕಗಳನ್ನೂ ವಿದ್ಯಾರ್ಥಿಗಳಿಗೆ ಕಲಿಸಿದ್ದಾರೆ.

### ಕನ್ನಡ ಮಾತನಾಡುವ ಪೌಲ್

ಶಾಲಾ ಮಕ್ಕಳೊಂದಿಗೆ ಮಕ್ಕಳಾಗಿ ಬೆರೆತ ಪೌಲ್ ಅವರ ನಾಲಿಗೆ ಮೇಲೆ ಕೆಲವು ಕನ್ನಡ ಪದಗಳೂ ಹೊರಳಾಡುತ್ತಿವೆ. ‘ಮಕ್ಕಳಿಗಾಗಿ ಕನ್ನಡ ಕಲಿತೆ. ಮಗುವೊಂದು ಬಳಿ ಬಂದು ‘ನೀವು ಮಾತ್ರ ನಮಗೆ ಇಂಗ್ಲಿಷ್ ಹೇಳಿ ಕೊಡುತ್ತೀರಿ. ನಾವೂ ನಿಮಗೆ ಕನ್ನಡ ಕಲಿಸುತ್ತೇವೆ’ ಎಂದಿತು. ಆಗ ಅಚ್ಚರಿ ಜತೆಗೆ ಖುಷಿಯೂ ಆಯಿತು. ಅಂದಿನಿಂದ ಕನ್ನಡ ಮಾತನಾಡುವುದನ್ನು ಕಲಿತೆ’ ಎಂದು ಬೀಗುವ ಅವರು, ‘ನನಗೂ ಸ್ವಲ್ಪ ಕನ್ನಡ ಗೊತ್ತು’, ‘ನಮ್ಮ ಕೆಲಸ ಶಿಕ್ಷಣ ಕೊಡುವುದು’, ‘ನಮ್ಮ ಸ್ನೇಹಿತ ತುಂಬಾ ಒಳ್ಳೆಯವನು’, ‘ಊಟ ಆಯ್ತಾ’, ‘ಶುಭರಾತ್ರಿ’, ‘ಹೇಗಿದ್ದೀರಾ’, ‘ತುಂಬಾ ಖುಷಿ ಆಯಿತು’ ಇತ್ಯಾದಿ ವಾಕ್ಯಗಳನ್ನು ಮಾತನಾಡುತ್ತಾರೆ.

‘ಜರ್ಮನಿಯಲ್ಲಿ ಎಲ್ಲದಕ್ಕೂ ನಿಯಮಗಳು. ಅವುಗಳನ್ನು ಪಾಲನೆ ಮಾಡಲೇಬೇಕು. ಆದರೆ, ಇಲ್ಲಿ ಹಾಗಲ್ಲ. ನಿಯಮಗಳು ಕಡಿಮೆ ಇದ್ದರೂ ಕಠಿಣತೆ ಇರುವುದಿಲ್ಲ. ಹಾಗಾಗಿ, ಕೆಲವೊಂದನ್ನು ಸುಲಭದಲ್ಲಿ ಪಡೆಯಬಹುದು’ ಎನ್ನುತ್ತಾರೆ ಪೌಲ್. ಉದಾಹರಣೆಗೆ ಒಬ್ಬ ವ್ಯಕ್ತಿ ಕೆಲಸಕ್ಕೆ ಸೇರಿಕೊಳ್ಳಬೇಕಾದರೆ ಅದಕ್ಕೆ ವಿದ್ಯಾಭ್ಯಾಸ ಮುಗಿಸಿದ ಪ್ರಮಾಣ ಪತ್ರ, ವಿಮೆ, ಪರವಾನಗಿ ಇತ್ಯಾದಿ ದಾಖಲೆಗಳನ್ನು ಕೊಡಬೇಕು. ಯಾವುದೇ ಸಣ್ಣ ಪುಟ್ಟ ಕೆಲಸ ಪಡೆಯಬೇಕೆಂದರೂ ಈ ನಿಯಮ ಕಡ್ಡಾಯ. ಭಾರತದಲ್ಲೂ ಇವುಗಳನ್ನು ಸಾದರಪಡಿಸುವ ನಿಯಮವಿದ್ದರೂ ಸಣ್ಣ ಪುಟ್ಟ ಕೆಲಸಗಳನ್ನು ಸುಲಭದಲ್ಲಿ ಪಡೆಯಬಹುದು. ‘ಇದು ಕೆಲಸ ಅರಸುವ ಯುವಕರಿಗೆ ಅನುಕೂಲಕರ’ ಎನ್ನುತ್ತಾರೆ ಅವರು.

‘ಕೆಲವೊಂದಕ್ಕೆ ನಿಯಮಗಳು ಕಠಿಣವಾಗಿರಬೇಕು. ರಸ್ತೆ ನಿಯಮಗಳನ್ನು ಇಲ್ಲಿ ಅಷ್ಟಾಗಿ ಪಾಲನೆ ಮಾಡುವುದಿಲ್ಲ. ಹೇಗೆ ಬೇಕೊ ಹಾಗೆ ವಾಹನ ಓಡಿಸುವ ಸವಾರರನ್ನು ನೋಡಿ ಆತಂಕವಾಗುತ್ತದೆ’ ಎನ್ನುತ್ತಾರೆ ಪೌಲ್.

ಇಲ್ಲಿನ ಹಬ್ಬಗಳೆಂದರೆ ಪೌಲ್ ಅವರಿಗೆ ಅಚ್ಚುಮೆಚ್ಚು. ದೀಪಾವಳಿ ಹಬ್ಬದಲ್ಲಿ ಮಣ್ಣಿನ ದೀಪಕ್ಕೆ ಎಣ್ಣೆ ಹಾಕಿ ಬತ್ತಿ ಇಟ್ಟು ದೀಪ ಹಚ್ಚುವ ಪ್ರಕ್ರಿಯೆ ಅವರ ಮನಸ್ಸನ್ನು ಉಲ್ಲಾಸಿತಗೊಳಿಸಿದೆ. ಸಾಲು ಸಾಲು ದೀಪಗಳನ್ನು ಹಚ್ಚಿಟ್ಟು ಹಬ್ಬ ಆಚರಿಸುವ ಪದ್ಧತಿ ಅವರಿಗೆ ವಿಸ್ಮಯವಾಗಿ ಕಂಡಿದೆ. ಇನ್ನು ಗಣಪತಿ ಹಬ್ಬದಲ್ಲಿ ಮಣ್ಣಿನ ಗಣೇಶನ ಮೂರ್ತಿ ತಂದು ಪೂಜೆ ಮಾಡಿ ಅದನ್ನು ನೀರಿನಲ್ಲಿ ಮುಳುಗಿಸಲು ಮೆರವಣಿಗೆಲ್ಲಿ ಕೊಂಡೊಯ್ದದ್ದು, ಆಗ ಸ್ನೇಹಿತರೊಂದಿಗೆ ರಸ್ತೆಯಲ್ಲಿ ‘ಸ್ಟೆಪ್’ ಹಾಕಿದ್ದು ಅವರ ನೆನಪಿನ ಬುತ್ತಿಯಲ್ಲಿ ಸೇರಿವೆ. ಈಚೆಗೆ ನಡೆದ ರಂಜಾನ್ ಹಬ್ಬವೂ ಅವರನ್ನು ಸೆಳೆದಿದೆ. ಇಫ್ತಾರ್ ಕೂಟದಲ್ಲಿ ಭಾಗಿಯಾಗಿದ್ದ ಅವರು ಹೊಟ್ಟೆಬಿರಿಯುವಂತೆ ತಿಂದರಂತೆ.

ಹಾರೆ–ಗುದ್ದಲಿ ಹಿಡಿದು ಕೆಲಸ ಮಾಡಿರುವ ಪೌಲ್, ಸ್ನೇಹಿತರೊಂದಿಗೆ ಚಾರಣ ಕೈಗೊಂಡು ಪುಳಕಿತರಾಗಿದ್ದಾರೆ. ಇಲ್ಲಿ ಕಳೆದ ಪ್ರತಿ ಕ್ಷಣಗಳೂ ಅವಿಸ್ಮರಣೀಯ ಎಂಬ ಖುಷಿ ಅವರಿಗೆ.

■ ಸುಮಾ ಬಿ